**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417104

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office, CESC, Mysuru-570017
**Web Site: www.cescmysore.org.**
E-mail ID: gmtech @cescmysore.org

Company Identitiy Number[CIN]:- **U40109KA2004SGC035177**

**'ಅಧೀಕೃತ ಜ್ಞಾಪನಾ'**

ವಿಷಯ: ಚಾವಿಸನಿನಿಯ ನಿಗಮ ಕಛೇರಿಯ ಆವರಣದಲ್ಲಿನ ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ನ್ನು ಚಾಲನೆಗೊಳಿಸುವ ಬಗ್ಗೆ.

ಉಲ್ಲೇಖ: 1. ಇಂಧನ ಇಲಾಖೆ, ಭಾರತ ಸರ್ಕಾರದ ಪತ್ರದ ಸಂಖ್ಯೆ: 12/2/2018-EV ದಿನಾಂಕ: 14.12.2018.
2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : CI 117 SPI 2017 ದಿನಾಂಕ: 25.09.2017- "Karnatka Electric Vehicle & Energy Storage Policy 2017"
3. ಸಂ: CESC/GM(P)/DGM(P)/AGM(P)-2/2019-20/13104 ದಿನಾಂಕ: 03.10.2019- ಖರೀದಿ ಆದೇಶ.
4. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದಿತ ಟಿಪ್ಪಣಿ ದಿನಾಂಕ: 23.12.2020.

**ಪೀಠಿಕೆ :**

ಅ. ಘನ ಕೇಂದ್ರ ಹಾಗೂ ರಾಜ್ಯ ಸರ್ಕಾರವು ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಹಾಗೂ ಬಳಕೆಯನ್ನು ಉತ್ತೇಜನ ನೀಡುತ್ತಿದೆ. ವಿದ್ಯುತ್ ವಾಹನಗಳನ್ನು ತ್ವರಿತವಾಗಿ ಬಳಕೆ ಮಾಡಲು ಮೂಲ ಸೌಕರ್ಯಗಳ ಅವಶ್ಯಕತೆಗಳಲ್ಲಿ ಚಾರ್ಜಿಂಗ್ ಸ್ಟೇಷನ್ ಪ್ರಮುಖವಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು ದಿನಾಂಕ: 14.12.2018ರಂದು ಉಲ್ಲೇಖ(1) ರಲ್ಲಿ ಮಾರ್ಗಸೂಚಿಯನ್ನು ಹಾಗೂ ರಾಜ್ಯ ಸರ್ಕಾರವು 25.09.2017ರಲ್ಲಿ "Karnatka Electric Vehicle & Energy Storage Policy 2017" ನ್ನು ಬಿಡುಗಡೆ ಮಾಡಿರುತ್ತದೆ.

ಆ. ಪ್ರಸ್ತುತ ಪರಿಸರದಲ್ಲಿನ ಇಂಗಾಲ ಮತ್ತು ತಾಪಮಾನವನ್ನು ಕಡಿಮೆಗೊಳಿಸುವ, Green Energy ಯ ಬಳಕೆ ಮತ್ತು ವಿದ್ಯುತ್ ವಾಹನಗಳ ಉತ್ತೇಜಿಸುವ ಕಾರ್ಯಕ್ರಮಗಳಿಗೆ ಸರ್ಕಾರದೊಂದಿಗೆ ಕೈ ಜೋಡಿಸುವುದು ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ.

ಇ. ಈ ಸಂಬಂಧ ಚಾವಿಸನಿನಿಯ ನಿಗಮ ಕಛೇರಿಯ ಆವರಣದಲ್ಲಿ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಿ ಸಾರ್ವಜನಿಕರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮೆ॥ Spectrum Consultants, #2236, 1st Floor, 23rd Cross, BSK 2nd stage, Bengaluru-70 ರವರಿಂದ ಉಲ್ಲೇಖ(3)ರಂತೆ AC &DC charger ಗಳನ್ನು ಅಳವಡಿಸಲಾಗಿರುತ್ತದೆ.

ಈ. ಚಾರ್ಜಿಂಗ್ ಸ್ಟೇಷನ್‌ನ್ನು ಉದ್ಘಾಟಿಸಿ ಸಾರ್ವಜನಿಕ ಉಪಯೋಗಕ್ಕೆ ಬಿಡಲು ಈ ಕೆಳಕಂಡ ಆದೇಶವನ್ನು ಹೊರಡಿಸಲು ನಿರ್ದೇಶಿಸಲ್ಪಟಿರುತ್ತೇನೆ.

ಪ.ಸಂ:ಪ್ರವ್ಯ(ತಾಂ)/ಉಪ್ರವ್ಯ(ಡಿಎಸ್‌ಎಮ್)/ಸಪ್ರವ್ಯ(ಡಿಎಸ್‌ಎಮ್)/ಟಿಡಿಎಫ್-10/2020-21/cys-1461 ದಿನಾಂಕ: 22 JAN 2021

**ಆದೇಶ :**

- ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ನಿಗಮ ಕಛೇರಿಯ ಆವರಣದಲ್ಲಿ ಅಳವಡಿಸಿರುವ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್‌ನ್ನು ದಿನಾಂಕ: 26.01.2021 ರಂದು ಉದ್ಘಾಟಿಸಿ, ಪ್ರಾಯೋಗಿಕವಾಗಿ ಸಾರ್ವಜನಿಕ ಉಪಯೋಗಕ್ಕೆ ಅನುವು ಮಾಡಿಕೊಡಲಾಗುತ್ತದೆ.

......2

- ಸದರಿ ಚಾರ್ಜಿಂಗ್ ಸ್ಟೇಷನ್‌ನಲ್ಲಿ AC-001 ಮತ್ತು Bharat DC-001(15 KW) charger ಗಳನ್ನು ಪ್ರಯೋಗಿಕವಾಗಿ ಅಳವಡಿಸಿದ್ದು ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಿದ್ಯುತ್ ಚಾಲಿತ ವಾಹನಗಳನ್ನು ಕಛೇರಿ ಸಮಯದಲ್ಲಿ ಚಾರ್ಜ್ ಮಾಡಿಕೊಳ್ಳಬಹುದು. ಮೊದಲ 3 ತಿಂಗಳು ಯಾವುದೇ ಶುಲ್ಕವಿಲ್ಲದೆ ಉಚಿತವಾಗಿ ಚಾರ್ಜ್ ಮಾಡಿಕೊಳ್ಳಲು ಅವಕಾಶ ನೀಡಿದ್ದು ತದನಂತರ no profit no loss ನಡಿ ವಿದ್ಯುತ್ ಶುಲ್ಕವನ್ನು ವಿಧಿಸಲಾಗುವುದು.

ಚಾರ್ಜಿಂಗ್ ಸ್ಟೇಷನ್‌ನ ಉಸ್ತುವಾರಿಯನ್ನು ನಿಗಮ ಕಛೇರಿಯ ಕಾಮಗಾರಿ ಶಾಖೆಯ ಕಿರಿಯ ಇಂಜಿನಿಯರ್(ವಿ) ರವರು ನೋಡಿಕೊಳ್ಳತಕ್ಕದ್ದು. ಇದರಂತೆ ಸದರಿಯವರು ಚಾರ್ಜಿಂಗ್ ವಾಹನಗಳ ದಿನಚರಿ, ವಿದ್ಯುತ್ ಬಳಕೆ ಮತ್ತು ವಿದ್ಯುತ್ ಮಾಪಕದ ರೀಡಿಂಗ್ ನಿರ್ವಹಿಸಿ ಪ್ರತಿ ಮಾಹೆ 5ನೇ ತಾರೀಖಿನೊಳಗೆ ಸದರಿ ಅಂಕಿ-ಅಂಶಗಳನ್ನು ನಿಗಮ ಕಛೇರಿಯ ಡಿ.ಎಸ್.ಎಮ್ ಶಾಖೆಗೆ ಸಲ್ಲಿಸಲು ಕ್ರಮವಹಿಸುವಂತೆ ಈ ಆದೇಶ ಹೊರಡಿಸಲಾಗಿದೆ.

22/01/21

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ., ಮೈಸೂರು/ಹಾಸನ.
2. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಛೇರಿ, ಚಾ.ವಿ.ಸ.ನಿ.ನಿ, ಮೈಸೂರು.
3. ಪ್ರಧಾನ ವ್ಯವಸ್ಥಾಪಕರು(ಖರೀದಿ), ನಿಗಮ ಕಛೇರಿ, ಚಾ.ವಿ.ಸ.ನಿ.ನಿ, ಮೈಸೂರು.
4. ಪ್ರಧಾನ ವ್ಯವಸ್ಥಾಪಕರು(ಆ. ಮತ್ತು ಮಾ.ಸಂ), ನಿಗಮ ಕಛೇರಿ, ಚಾ.ವಿ.ಸ.ನಿ.ನಿ, ಮೈಸೂರು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ , ಚಾವಿಸನಿನಿ.
6. ಉಪ-ಪ್ರಧಾನ ವ್ಯವಸ್ಥಾಪಕರು(ಕಾಮಗಾರಿ), ನಿಗಮ ಕಾರ್ಯಾಲಯ, ಚಾವಿಸನಿನಿ. ಮೈಸೂರು ಸೂಕ್ತ ವ್ಯವಸ್ಥೆ ಮಾಡಲು.
7. ಉಪ-ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರವರ ಆದ್ಯ ಗಮನಕ್ಕೆ ತರಲು ಕೋರಿದೆ.
ಮುಖ್ಯ ಕಡತ/ ಕಛೇರಿ ಪ್ರತಿ.